ಜಿ|| ನಂ.	ಪಟ್ಟಿ ನಂ.	ನಗದ ಹೆಸರು.	ಪಟ್ಟೀ ಮೇರೆ ಅಂದಾಜ್ ರೂ.
52	476	ವಂಟಿ ಕೆಂಪಿನ ವುಂಗುರ 1ಕ್ಕೆ	20
53	486	ಡಿಟೋ ವುಂಗ) 1ಕ್ಕೆ	10
54	511	ಕೆಂಪಿನ ಅಡ್ಡಿಕೆ 1ಕ್ಕೆ	560
55	357	ಚಿನ್ನದ ಕಾಲಂದಿಗೆ ಜೋಡಿ 1ಕ್ಕೆ	22
56	530	ತನಬೀರು ವುಂಗುರ 1ಕ್ಕೆ	15
57	554	ಗೊಂಬೆಜಂದವಮಾವು	75
58	555	ಕೆಂಪುಪಚ್ಚೆ ಅರ್ಧ ಚಂದ)	100
59	527	ಪಚ್ಚೆ ವುಂಗುರ 1ಕ್ಕೆ	10
60	117	ಕೆಂಪಿನ ಮಕರಕಂಠಿ 1ಕ್ಕೆ	4,000
			24,316
61	57	ಕೆಂಪಿನ ಪನ್ನೆ ಜೋಡಿ 1ಕ್ಕೆ	250
62	92	ಕೆಂಪಿನ ಬೆಂಡವಾಲೆ ಜೋಡಿ 1ಕ್ಕೆ	470
63	148	ವಜ್ರದ ಕಂಕಣಿ ಜೋಡಿ 1ಕ್ಕೆ	2,500
64	27	ಮುತ್ತಿನ ಕುಚ್ಚು 1ಕ್ಕೆ	750
65	134	ವಜ್ರದ ಬಳೆ 2ಕ್ಕೆ	1,000
66	433	ವಜ್ರದ ಹಾತ ಪಾಂಚಿ ಜೋಡಿ 1ಕ್ಕೆ	450
67	434	ಡಿಟೋ ಬಾಜೂಬಂದು 1ಕ್ಕೆ	800
68	179	ಜುಂಜಪಟ್ಟಿ 1ಕ್ಕೆ	600
69	35	ಮುತ್ತಿನ ಮೂಗುತಿ 2ಕ್ಕೆ	500
			7,320
		ಗ್ರಾಂಡ್ ಟೋಟಲ್ ..	60,073

ಇ. ಸಿ. ಚಿದಂಬರಂ ಐಯ್ಯರ್,
ಪ್ಯಾಲೆಸ್ ಅ|| ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 27ನೇ ಜೂನ್ 1884.

ಷಿಕಾರಿಪುರದಲ್ಲಿ ಹೊಸ ತಾಲ್ಲೂಕು ಕಛ್ಚೇರಿ ಕಟ್ಟಣವನ್ನು ಕಟ್ಟುವದಕ್ಕೆ ಮೈಸೂರು ಗವರ್ಮೆಂಟಿನಿಂದ ಮಂಜೂರಾಗಿರುತ್ತೇಯಾಗಿ ಸದರೀ ಕೆಲಸವನ್ನು ನೆರವೇರಿಸುವದಕ್ಕೆ ಇದರಿಂದ ದರಖಾಸ್ತು ಅಪೇಕ್ಷಿಸಲ್ಪಡುತ್ತೆ.

1. ತಾಲ್ಲೂಕು ಕಛ್ಚೇರಿಗೆ ಗೊತ್ತಾದ ನಮೂನೇ ಪ್ರಕಾರ ಕಟ್ಟಣವು ಕಟ್ಟಿಸಲ್ಪಡತಕ್ಕದ್ದು. ಮತ್ತು ಪುಮಾರ್ 15,000 ರೂ ಪಾಯಿಗಳು ಲಾಗವಡು ಹಿಡಿಯತಕ್ಕದ್ದು.

2. ಪ್ರತಿ ದರಖಾಸ್ತಿನ ಸಂಗಡಲೂ 500 ರೂಪಾಯಿಗಳು ನಗದಾಗಿಯಾಗಲಿ ಅಥವಾ ಕರೆನ್ಸಿ ನೋಟಿನ ಮೂಲಕವಾಗಿಯಾಗಲಿ ಮುಂಗಡ ತರೀಕ ಡಿಪಾಜಿಟ್ ಕಟ್ಟತಕ್ಕದ್ದು.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಜಾಮೀನೀ ಹಾಜರ್ಮಾಡುವದಕ್ಕೂ ಮತ್ತು ಅವನ ದರಖಾಸ್ತು ಅಂಗೀಕರಿಸಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ಹದಿನೈದು ದಿನಗಳೊಳಗಾಗಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದುಕೊಡುವದಕ್ಕೂ ಅಪೇಕ್ಷಿಸಲ್ಪಡುವನು;

ತಪ್ಪಿದರೆ ಮೇಲ್ಕಂಡ ಕಲಂನಲ್ಲಿ ನಮೂದಾದ 500 ರೂಪಾಯಿಗಳು ಡಿಪಾಜಿಟ್ ಸರ್ಕಾರಕ್ಕೆ ದಂಡವಾಗಿ ಜೇರಿಸಿಕೊಳ್ಳಲ್ಪಟ್ಟು ಹೊಸ ಸ್ತು ಖಾಯಿಷ್ ಮಾಡಲ್ಪಡುವವು. ಮಂಜೂರ್ಮಾಡಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕೂಡ್ಲೆ ವಾಪಸ್ ಮಾಡಲ್ಪಡುವದು.

4. ದರಖಾಸ್ತಿನಲ್ಲಿ ಕೆಲಸದ ಪ್ರತಿ ಬಾಬಿಗೂ ಖಾಯಿಷ್ ಮಾಡಿದ ದರ, ಪೂರಾ ಕೆಲಸವು ಪೂರೈಸುವ ಕಾಲ, ಯಾವ ತಪ್ಪಾಗಲಿ ಬಾದರೆ ಆ ಬಗ್ಗೆ ದಂಡ ಇಂತಾದ್ದನ್ನು ನಮೂದಿಸತಕ್ಕದ್ದು.

5. ದರಖಾಸ್ತು ಬಂದು ಮಾಡಲ್ಪಟ್ಟು "ಶಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಗೆ ದರಖಾಸ್ತು" ಯೆಂದು ವಿಲಾಸ ಖರಯಲ್ಪಟ್ಟು, ಶಿವಮೊಗ್ಗಾ ಡಿವೀರ್ಜ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸ್ರ್ 1884ನೇ ಜುಲೈ 15ನೇ ಮಟ್ಟಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

6. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ್ ಹೆಡ್‌ಗಳ ಷೆಡ್ಯೂಲ್ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ದರಖಾಸ್ತು ಮಾಡಿ ಪಡಕೊಳ್ಳಬಹುದು.

7. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಡಿ. ರಂಗರಾವ್,
ಫಾರ್ ಎಗ್ಜಿಕ್ಯೂಟಿವ್ ಇಂಜನಿಯರ್.

ಶಿವಮೊಗ್ಗಾ ಸಬ್ ಡಿವೀರ್ಜ ಮುನಸಿಫ್ ಮಾಜಿಸ್ಟ್ರೇಟ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಈ ಕೋರ್ಟ್ 1883ನೇ ಇಸವಿ ಅರಜನಲ್ ಕೇಸ್ ನಂಬರ್ 70ನೇ ಮೊಕದ್ದಮಾದಲ್ಲಿ ಹಾಜರಾದ, ಪೊಲೀಸಿನವರು ಗುಮಾನೀಮೇಲೆ ಹಿಡಿದು ಹಾಜರ್ ಪಡಿಸಿದ 4735ನೇ ನಂಬರ್ ಸ್ರ್ 1878ನೇ ಇಸವಿ ಬಂಬಾಯಿ ನೋಟ್ 10 ರೂಪಾಯಿನ ಬಾಬತು ಎಜಭಾಗದ ಅರ್ಧ ತುಂಡಿ ಬೇದಾವೆ ಸೊತ್ತಾಗಿ ಸೇರಿಸಿಕೊಂಡಿದೆ, ಯಿದಕ್ಕೆ ಯಾರಾದರು ವಾರಸ್‌ದಾರ್ರು ಯಿದ್ದರೆ ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಕೋರ್ಟು ರೂಬರೂ ಹಾಜರಾಗಿ ಬಾಧ್ಯತೆ ವ್ಯವಹರಿಸಿಕೊಳ್ಳಬೇಕು. ಆ ವೇರೆ ಯಾರೂ ಬಾರದಿದ್ದರೆ ವಾಯಿದಾನಂತರ ಸರಕಾರಕ್ಕೆ ಜೇರಿಸಿಕೊಳ್ಳಲಾಧೀತು.

ತಾರೀಖು 7ನೇ ಮಾಹೆ ಜೂ 1884ನೇ ಇಸವಿ.

ವಿ. ಡಿ. ಪೊನ್ನರಂಗಂ ಮೊದಲಿಯಾರ್,
ಸಕೆಂಡ್ ಕ್ಲಾಸ್ ಮಾಜಿಸ್ಟ್ರೇಟ್.

ಸ್ರ್ 1884ನೇ ಇಸವಿ ಏಪ್ರಲ್ ತಿಂಗಳ ಕಾಲಸ್ಥಿತೀ ರಿಪ್ರೋರ್ಟು.

ಮೈಸೂರು ಡಿಸ್ಟ್ರಿಕ್ಟು.

ಮಳೆ—ಡಿಸ್ಟ್ರಿಕ್ಟ್‌ನಮುಳೆ ಸಾಧಾರಣವಾಗಿ ಮಳೆ ಬಿದ್ದಿರುತ್ತೆ; ರಿಜಿಸ್ಟ್ರಾದ ಸರಾಸರಿ ಪರಿಮಾಣವು 1 ಅಂಗುಲ 11¼ ಸೆಂಟ್ಸ್.

ಬೆಳೆಗಳು.—ಬೆಳೆಯಲ್ಲಿರುವ ಫಸಲ್‌ಗಳು ಚನ್ನಾಗಿವೆ: ಈ ತಿಂಗಳೊಳಗೆ ಕಾರ್ ರಾಗಿ, ಜೋಳ, ನೆಲ್ಲು, ಹೆಸರು, ಉದ್ದು ಮತ್ತು ಯೆಳ್ಳು ಬಿತ್ತಲ್ಪಟ್ಟವು, ಗನ್ನ ಕಟಾವಾಯಿತು.

ಕಾಲ್ನಡೆ—ಡಿಸ್ಟ್ರಿಕ್ಟಿನಲ್ಲಿ ಗೋಮಾರೀ ರೋಗವು ಇಲ್ಲ. ಆದರೆ ಇತರ ಕಾರಣಗಳಿಂದ 1,428 ಕಾಲ್ನಡೆಗಳು ಹೋಗಿರುತ್ತವೆ.

ದಾರಣೆಗಳು.—ಅವಲ್ ತರಹೆ ಅಕ್ಕಿ ರೂಪಾಯಿ ಬಂದಕ್ಕೆ 12 ಶೇರು; ದುಯ್ಯೋಂ ತರಹೆ 13 ಶೇರು; ರಾಗಿ 30 ಶೇರು; ಮತ್ತು ಹುರಳಿ 25 ಶೇರು; ಜಿನಸಿಗಳ ದಾರಣೆಗಳುಈ ಪ್ರಕಾರ ಇದ್ದವು.

ಎಸ್. ಚೆಲುವಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.